ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ (ರಿ), ದಾವಣಗೆರೆ.

SJJES
ಸ್ಥಾಪನೆ- 1962

# ವಿದ್ಯಾವರಣ

ವಿಶೇಷ ಪುರವಣಿ ಮಕ್ಕಳ ಮಾಸಪತ್ರಿಕೆ

ದಿನಾಂಕ : 14/07/2026 : www.sjjes.ac.in : info@sjjes.ac.in : +91.8192.277698

## ಅಂತರಾಷ್ಟ್ರೀಯ ಯೋಗ ದಿನಾಚರಣೆ ಜೂನ್ 21





ಯೋಗವು ಪ್ರಾಚೀನ ಭಾರತದಲ್ಲಿ ಹುಟ್ಟಿಕೊಂಡ ದೈಹಿಕ ಮಾನಸಿಕ ಮತ್ತು ಆಧ್ಯಾತ್ಮಿಕ ಅಭ್ಯಾಸವಾಗಿದೆ. 21 ಜೂನ್ 2015 ರಂದು ವಿಶ್ವದಾದ್ಯಂತ ಮೊದಲ ಅಂತರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು. ಈ ದಿನದಂದು ನಮ್ಮ ಶಾಲೆಯಲ್ಲಿ ನಮ್ಮ ಶಾಲೆಯ ಎಲ್ಲಾ ವಿದ್ಯಾರ್ಥಿಗಳು ಯೋಗ ದಿನದ ಪ್ರಾಮುಖ್ಯತೆ, ಮುಖ್ಯವಾದ ಯೋಗಾಸನಗಳನ್ನು ಮಾಡುವುದರ ಮೂಲಕ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಸಹಾಯಕವಾದ ಯೋಗಗಳನ್ನು ಮಾಡುವ ಮೂಲಕ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಈ ಒಂದು ಯೋಗ ದಿನಾಚರಣೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಎಲ್ಲಾ ಶಿಕ್ಷಕರು ಸಿಬ್ಬಂದಿವರ್ಗದವರೂ ಸಹ ಭಾಗವಹಿಸಿದ್ದರು.

## ಜಿ.ವಿ.ಸಿ.ಹೆಚ್.ಎಸ್. ನಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ

ಗುರುಬಸಮ್ಮ ವಿ. ಚಿಗಟೇರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆ ಆಂಗ್ಲ ಮಾಧ್ಯಮದಲ್ಲಿ ಅಕ್ಕಮಹಾದೇವಿ ಯೋಗ ಶಾಲೆ ಸಹಯೋಗದಲ್ಲಿ ದಿನಾಂಕ ಜೂನ್ 21, 2026ರಂದು ವಿಶ್ವ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಅಕ್ಕಮಹಾದೇವಿ ಯೋಗ ಶಾಲೆಯ ಯೋಗ ಶಿಕ್ಷಕರಾದ ಶ್ರೀ ವಿಶ್ವನಾಥ್ ಅವರು ಮಾತನಾಡಿ ಯೋಗದ ಇತಿಹಾಸ ಹಾಗೂ ಮಹತ್ವದ ಬಗ್ಗೆ ನಮ್ಮ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಎಲ್ಲಾ ವಿದ್ಯಾರ್ಥಿಗಳು ಹಾಗೂ ಶಿಕ್ಷಕ ಸಿಬ್ಬಂದಿಗಳು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಸಾಮೂಹಿಕವಾಗಿ ಯೋಗಾಭ್ಯಾಸವನ್ನು ಮಾಡಿಸಲಾಯಿತು.



# ಶಾಲಾ ಸಂಸತ್ ಚುನಾವಣೆ 2026 – 27







ದಿ: 29–6–2026 ರಂದು ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಶಾಲಾ ಸಂಸತ್ ಚುನಾವಣೆಯನ್ನು ನಡೆಸಲಾಯಿತು. ಈ ಒಂದು ಚುನಾವಣೆಯಲ್ಲಿ ಮೊದಲಿಗೆ ತರಗತಿ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು. ಪ್ರತಿಯೊಬ್ಬ ವಿದ್ಯಾರ್ಥಿಯು ಮತವನ್ನು ಹಾಕುವುದರ ಮೂಲಕ ತರಗತಿ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು. 8ನೇ ತರಗತಿಯಲ್ಲಿ ಪ್ರಜ್ವಲ್ ಮತ್ತು ಪೃಥ್ವಿ ಸಿ ತರಗತಿ ಪ್ರತಿನಿಧಿಗಳಾಗಿ ಆಯ್ಕೆಯಾಗಿರುತ್ತಾರೆ. 9ನೇ ತರಗತಿಯಿಂದ ಸಾಗರ್ ಎಂ ಶೇಟ್ ಪ್ರಥಮ ಮತ್ತು ನಿಖಿತ ದ್ವಿತೀಯ ಸ್ಥಾನವನ್ನು ಪಡೆದಿರುತ್ತಾರೆ. ಈ ವಿದ್ಯಾರ್ಥಿಗಳು ತರಗತಿ ಪ್ರತಿನಿಧಿಗಳಾಗಿರುತ್ತಾರೆ. 10ನೇ ತರಗತಿ ವಿಭಾಗದಲ್ಲಿ ಚಂದನ ಸಿ ಪ್ರಥಮ ಶಿವಕುಮಾರ್ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿರುತ್ತಾರೆ. ಈ ವಿದ್ಯಾರ್ಥಿಗಳು ತರಗತಿಯ ಪ್ರತಿನಿಧಿಗಳಾಗಿರುತ್ತಾರೆ.

ಈ ಚುನಾವಣೆಯನ್ನು ನಡೆಸುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಮತದಾನದ ಅರಿವು ಮತ್ತು ಜಾಗೃತಿಯನ್ನು ಮೂಡಿಸುವುದು. ಮತದಾನದಿಂದ ಮಕ್ಕಳ ಭಾಗವಹಿಸುವಿಕೆ ಮತದಾನ ಮಾಡುವ ಅರಿವನ್ನು ಮೂಡಿಸಿದರು. ಕ್ರೀಡಾ ಮತ್ತು ಸಾಂಸ್ಕೃತಿಕ ಸಂಸ್ಥೆಯ ಕಾರ್ಯದರ್ಶಿಯಾಗಿ ಕುಮಾರ್ ದಿಲೀಪ್ ಹಾಗೂ ಸಹ ಕಾರ್ಯದರ್ಶಿಯಾಗಿ ತನುಜ ಆಯ್ಕೆಯಾಗಿರುತ್ತಾರೆ. ಅದೇ ರೀತಿಯಾಗಿ ಕ್ರೀಡಾ ಕಾರ್ಯದರ್ಶಿಯಾಗಿ ಪ್ರಜ್ವಲ್, ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ಹರ್ಷಿತ್ ಸಿ, ಆರೋಗ್ಯ ಮತ್ತು ಶಿಸ್ತು ಮಂತ್ರಿಯಾಗಿ ಆಕಾಶ್ ಕುಮಾರ್ ಎಚ್ ಹಾಗೂ ಪರಿಸರ ಮಂತ್ರಿಯಾಗಿ ಸುಹೇಲ್, ಪ್ರವಾಸ ಮಂತ್ರಿಯಾಗಿ ಶಿವಕುಮಾರ್, ವಾರ್ತಾ ಮಂತ್ರಿಯಾಗಿ ಶರಣು ಹಿರೇಮಠ ಅವರು ಆಯ್ಕೆಯಾಗಿರುತ್ತಾರೆ. ಈ ಎಲ್ಲಾ ಮಕ್ಕಳಿಗೆ ಶಿಕ್ಷಕರ ಪರವಾಗಿ ಮತ್ತು ಆಡಳಿತ ಮಂಡಳಿ ಯವರ ಪರವಾಗಿ ಹೃತ್ಪೂರ್ವಕವಾದ ಅಭಿನಂದನೆಗಳು.

## ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯಲ್ಲಿ 2026-27ನೇ ಸಾಲಿನ ವಿದ್ಯಾರ್ಥಿ ಸಂಘದ ರಚನೆ




ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯಲ್ಲಿ 2026-27ನೇ ಸಾಲಿನ ವಿದ್ಯಾರ್ಥಿ ಸಂಘದ ಚುನಾವಣೆಯನ್ನು ವಿದ್ಯಾರ್ಥಿಗಳಿಗೆ ಮೊಬೈಲ್ EVM ಬಳಸಿ ಗೌಪ್ಯ ಮತದಾನದ ಮೂಲಕ ಚುನಾವಣಾ ಸಾಕ್ಷರತಾ ಕ್ಲಬ್ ಅಡಿಯಲ್ಲಿ ಸಾರ್ವತ್ರಿಕ ಚುನಾವಣೆ ಮಾದರಿಯಲ್ಲಿ ಚುನಾವಣಾ ಅಧಿಸೂಚನೆ, ನಾಮಪತ್ರ ಸಲ್ಲಿಕೆ, ನಾಮಪತ್ರ ಪರಿಶೀಲನೆ, ನಾಮಪತ್ರ ಹಿಂಪಡೆಯುವುದು, ಅಭ್ಯರ್ಥಿಗಳ ಘೋಷಣೆ, ಚುನಾವಣಾ ಪ್ರಚಾರ ಹೀಗೆ ಎಲ್ಲಾ ಪ್ರಕ್ರಿಯೆಗಳ ಬಗ್ಗೆ ಅರಿವು ಮೂಡಿಸಿ ದಿನಾಂಕ 4-7.2026ರಂದು ಬೆಳಗ್ಗೆ 10:30 ಕ್ಕೆ ಚುನಾವಣೆ ನಡೆಸಿ 11 ಗಂಟೆ 30 ನಿಮಿಷಕ್ಕೆ ಫಲಿತಾಂಶವನ್ನು ಘೋಷಿಸಲಾಯಿತು ಹಾಗೂ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು.



**ವಿದ್ಯಾರ್ಥಿ ಸಂಘಕ್ಕೆ ಆಯ್ಕೆಯಾದ ಅಭ್ಯರ್ಥಿಗಳು .**

ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಪ್ರಿಯಾ .ಕೆ. 10ನೇ ತರಗತಿ

ವಿದ್ಯಾರ್ಥಿ ಸಂಘದ ಸಹಕಾರ್ಯದರ್ಶಿ ಮೆಹಕ ತಾಜ್ 9ನೇ ತರಗತಿ A ವಿಭಾಗ

ಪತ್ರಿಕಾ ಕಾರ್ಯದರ್ಶಿ ತನುಜಾ ಹತ್ತನೇ ತರಗತಿ ಕ್ರೀಡಾಕಾರ್ಯದರ್ಶಿ ನಂದಿನಿ 9ನೇ ತರಗತಿ B

ಎಂಟನೇ ತರಗತಿ ಪ್ರತಿನಿಧಿಗಳು

ಅಂಬಿಕ N

ಚೈತ್ರ K B

9ನೇ ತರಗತಿ A ವಿಭಾಗ ಪ್ರತಿನಿಧಿಗಳು

ತಸ್ಮೀಯ

ಸುಮಲತಾ

9ನೇ ತರಗತಿ B ವಿಭಾಗ ಪ್ರತಿನಿಧಿಗಳು


ನಿಫ್ರಾಸುಜೈನ್

ಚಾಂದನಿ ಖಾನಂ

10ನೇ ತರಗತಿ ಪ್ರತಿನಿಧಿಗಳು ಅರ್ಚನಾ .D

ರುಕ್ಸರ್ ಬಾನು

## ಗುರುಬಸಮ್ಮ ವಿ. ಚಿಗಟೇರಿ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆ





ಗುರುಬಸಮ್ಮ ವಿ. ಚಿಗಟೇರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ದಿನಾಂಕ 04/07/2026 ರ ಶನಿವಾರ 2026–27 ಸಾಲಿನ ವಿದ್ಯಾರ್ಥಿ ಸಂಘದ ಚುನಾವಣೆಯನ್ನು ನಡೆಸಲಾಯಿತು. ಈ ಚುನಾವಣೆಯಲ್ಲಿ ಮೊಬೈಲ್ ಬಳಸಿ ಇ.ವಿ.ಎಂ. ಮೂಲಕ ಮತದಾನ ಮಾಡಿಸಿ ವಿದ್ಯಾರ್ಥಿಗಳಿಗೆ ಸಾರ್ವತ್ರಿಕ ಚುನಾವಣೆಯಲ್ಲಿ ಇ.ವಿ.ಎಂ. ಮೂಲಕ ಹೇಗೆ ಮತದಾನ ಮಾಡಬೇಕೆಂಬುದನ್ನು ತಿಳಿಸಿಕೊಡಲಾಯಿತು. ಈ ಚುನಾವಣೆಯ ಮೂಲಕ ವಿದ್ಯಾರ್ಥಿಗಳಿಗೆ ದೇಶದಲ್ಲಿ ಚುನಾವಣಾ ಪ್ರಕ್ರಿಯೆಗಳನ್ನು ಹೇಗೆ ನಡೆಸಲಾಗುತ್ತದೆ ಎಂಬ ಅರಿವನ್ನು ಮೂಡಿಸಲಾಯಿತು. ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾಗಿ ಕು. ಸಿದ್ಧಾರ್ಥ ಎಂ. 10ನೇ ತರಗತಿ, ಸಹಕಾರ್ಯದರ್ಶಿಯಾಗಿ ಕು.ತ್ರಿವೇಣಿ ಆಯ್ಕೆಯಾಗಿದ್ದಾರೆ. ತರಗತಿ ಪ್ರತಿನಿಧಿಗಳಾಗಿ 10ನೇ ತರಗತಿಯ ಎ ವಿಭಾಗದಿಂದ ಕು. ಪ್ರಜ್ವಲ್ ಸಿ. ಕು. ರುಫೀಜಾ ಖಾನಂ , 10 ಬಿ ವಿಭಾಗದಿಂದ ಕು. ಗೌತಮ್, ಕು. ಶ್ರೇಯಾ 9ನೇ ತರಗತಿಯಿಂದ ಗೌತಮ್ ಆರ್. ಜಾಹ್ನವಿ ಕೆ., 8ನೇ ತರಗತಿಯಿಂದ ಮಹಮದ್ ಗೌಸ್ ಪೀರ್, ಛಾಯಾ ಎಂ.ಜಿ. ಇವರುಗಳನ್ನು ಆಯ್ಕೆ ಮಾಡಲಾಯಿತು. ಪ್ರಾಥಮಿಕ ವಿಭಾಗದಿಂದ ವಿದ್ಯಾರ್ಥಿ ಕಾರ್ಯದರ್ಶಿಯಾಗಿ ಕು. ದರ್ಶನ್ ಎನ್. ಸಹಕಾರ್ಯದರ್ಶಿಯಾಗಿ ಕು. ಸಾನ್ವಿ ಆಯ್ಕೆಯಾಗಿದ್ದಾರೆ. 6ನೇ ತರಗತಿ ಪ್ರತಿನಿಧಿಯಾಗಿ ಕು. ಚಂದನ, ಮಹಮದ್ ನಹೀಂ., 7ನೇ ತರಗತಿ ಪ್ರತಿನಿಧಿಯಾಗಿ ಗೌತಮ್ ಎಸ್. ಪಿ. ಕು. ಜೋಯಾ ಇವರುಗಳು ಆಯ್ಕೆಯಾಗಿದ್ದಾರೆ.

# ಜಿ.ವಿ.ಸಿ.ಹೆಚ್.ಎಸ್. ನಲ್ಲಿ ವಿಶ್ವ ಮಾದಕ ವಸ್ತು ವಿರೋಧಿ ದಿನಾಚರಣೆ



ಗುರುಬಸಮ್ಮ ವಿ. ಚಿಗಟೇರಿ ಪ್ರೌಢಶಾಲೆಯಲ್ಲಿ ದಿನಾಂಕ 30/06/2026ರಂದು ಪೊಲೀಸ್ ಇಲಾಖೆಯ ಸಹಯೋಗದಲ್ಲಿ ವಿಶ್ವ ಮಾದಕ ವಸ್ತು ವಿರೋಧಿ ದಿನಾಚರಣೆಯನ್ನು ಆಚರಿಸಲಾಯಿತು.ಕಾರ್ಯಕ್ರಮದಲ್ಲಿ ಪೊಲೀಸ್ ಸಿಬ್ಬಂದಿ ಭಾಗವಹಿಸಿ ಮಾದಕ ವಸ್ತುಗಳ ಸೇವನೆಯಿಂದ ಆಗಬಹುದಾದ ಅನಾರೋಗ್ಯ ಸಮಸ್ಯೆಗಳ ಬಗ್ಗೆ ವಿವರವಾಗಿ ತಿಳಿಸಿಕೊಡುವುದರ ಮೂಲಕ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಯಾವತ್ತು ಮಾದಕ ವಸ್ತುಗಳನ್ನು ಬಳಸಬಾರದೆಂದು ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು. ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಂದ ಬೆಂಗಳೂರಿನಲ್ಲಿ ನಡೆದ ವಿಶ್ವ ಮಾದಕ ವಸ್ತು ವಿರೋಧಿ ದಿನಾಚರಣೆ ಕಾರ್ಯಕ್ರಮದ ನೇರ ಪ್ರಸಾರವನ್ನು ನಮ್ಮ ಶಾಲೆಯಲ್ಲಿ ಲ್ಯಾಪ್‌ಟಾಪ್ ಬಳಸಿ ವಿದ್ಯಾರ್ಥಿಗಳಿಗೆ ತೋರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಶಾಲೆಯ 10ನೇ ತರಗತಿ ವಿದ್ಯಾರ್ಥಿಗಳು, ಶಿಕ್ಷಕರು ಭಾಗವಹಿಸಿದರು.

# ಜಿ.ವಿ.ಸಿ.ಹೆಚ್.ಎಸ್ ನಲ್ಲಿ ಸ್ಮರಣ ಶಕ್ತಿ, ಏಕಾಗ್ರತೆ ಸುಧಾರಣೆ ತರಬೇತಿ




ಗುರುಬಸಮ್ಮ ವಿ. ಚಿಗಟೇರಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ದಿನಾಂಕ 09/07/2026 ರ ಗುರುವಾರ ಮಧ್ಯಾಹ್ನ 03.30ಕ್ಕೆ ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗಾಗಿ ಸ್ಮರಣ ಶಕ್ತಿ ಮತ್ತು ಏಕಾಗ್ರತೆ ಸುಧಾರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.ಈ ಕಾರ್ಯಕ್ರಮದಲ್ಲಿ ಅಂತರರಾಷ್ಟ್ರೀಯ ಖ್ಯಾತ ತರಬೇತುದಾರರಾದ ಎಸ್. ಪ್ರಶಾಂತ್ ರವರು ಭಾಗವಹಿಸಿ ಮೆದುಳಿನ ಬಲಭಾಗವನ್ನು ಹೇಗೆ ಬಳಸುವುದು ಹಾಗೂ ಆ ಮೂಲಕ ಜ್ಞಾಪಕ ಶಕ್ತಿಯನ್ನು ವೃದ್ಧಿಸಿಕೊಂಡು ಹೇಗೆ ಉತ್ತಮ ಅಂಕಗಳನ್ನು ಗಳಿಸಬಹುದು ಎಂಬುದನ್ನು ಹಾಗೂ ವಿದ್ಯಾರ್ಥಿಗಳು ಸುಲಭ ರೀತಿಯಲ್ಲಿ ಹೇಗೆ ಪಠ್ಯ ವಿಷಯಗಳನ್ನು ಕಡಿಮೆ ಶ್ರಮದಲ್ಲಿ ನೆನಪಿಟ್ಟು ಕೊಳ್ಳಬಹುದು ಎಂಬುದನ್ನು ವಿವರವಾಗಿ ತಿಳಿಸಿಕೊಟ್ಟರು.

# ಜಿ.ವಿ.ಸಿ.ಹೆಚ್.ಎಸ್. ನಲ್ಲಿ ದತ್ತಿ ಉಪನ್ಯಾಸ ಕಾರ್ಯಕ್ರಮ




ಗುರುಬಸಮ್ಮ ವಿ. ಚಿಗಟೇರಿ ಆಂಗ್ಲಮಾಧ್ಯಮ ಪ್ರೌಢಶಾಲೆಯಲ್ಲಿ ದಿನಾಂಕ 24/06/2026 ರಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಶಾಲಾ–ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು ಕಾರ್ಯಕ್ರಮವನ್ನು ಗುರುಬಸಮ್ಮ ವಿ. ಚಿಗಟೇರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಹೆಚ್. ನಿಂಗಪ್ಪ ಅವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ತಾಲ್ಲೂಕು ಕ.ಸಾ.ಪ. ಗೌರವ ಕಾರ್ಯದರ್ಶಿಗಳಾದ ಬೇತೂರು ಷಡಾಕ್ಷರಪ್ಪ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ದಾವಣಗೆರೆ ವಿ.ವಿ. ಕನ್ನಡ ವಿಭಾಗದ ಪ್ರಾಧ್ಯಾಪಕರಾದ ಡಾ. ಮಹಾಂತೇಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಕನ್ನಡ ಕಟ್ಟಿ ಬೆಳೆಸುವಲ್ಲಿ ತಂತ್ರಜ್ಞಾನದ ಪಾತ್ರ ಕುರಿತು ದತ್ತಿ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ದತ್ತಿ ದಾನಿಗಳಾದ ಮಲ್ಲಿಕಾರ್ಜುನ ಹಲಸಂಗಿ, ಟಿ.ಲಲಿತ್‌ಜೈನ್ ಉಪಸ್ಥಿತರಿದ್ದು ಕನ್ನಡ ಭಾಷೆ ಮತ್ತು ಸಾಹಿತ್ಯದ ಕುರಿತು ವಿದ್ಯಾರ್ಥಿಗಳಿಗೆ ತಿಳಿವಳಿಕೆ ಮೂಡಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯ ಮುಖ್ಯ ಉಪಾಧ್ಯಾಯರಾದ ಶ್ರೀ ಸುರೇಶ್ ನಾಯ್ಕ್ ವಹಿಸಿದ್ದರು. ಈ ಸಂದರ್ಭದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ, ಉಪಾಧ್ಯಕ್ಷರಾದ ಕೆ.ಸಿ.ಲಿಂಗರಾಜ್, ಟಿ.ಬಾಬುಲಾಲ್ ಜೈನ್, ಹಾಗೂ ಶಾಲೆಯ ಎಲ್ಲಾ ಶಿಕ್ಷಕ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ರಾಷ್ಟ್ರೀಯ ವೈದ್ಯರ ದಿನಾಚರಣೆ




" ಆರೋಗ್ಯವೇ ಭಾಗ್ಯ" ಎಂಬ ನುಡಿಯಂತೆ ಉತ್ತಮ ಆರೋಗ್ಯವು ಪ್ರತಿಯೊಬ್ಬರ ಜೀವನದ ಅಮೂಲ್ಯ ಸಂಪತ್ತಾಗಿದೆ. ನಮ್ಮ ಆರೋಗ್ಯವನ್ನು ಕಾಪಾಡುವಲ್ಲಿ ವೈದ್ಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ವೈದ್ಯರು ರೋಗಿಗಳಿಗೆ ಚಿಕಿತ್ಸೆ ನೀಡುವುದಕ್ಕೆ ಅಲ್ಲ ಅಲ್ಲ, ಅವರಲ್ಲಿ ಹೊಸ ಭರವಸೆ ಮತ್ತು ಆತ್ಮವಿಶ್ವಾಸವನ್ನು ಮೂಡಿಸುತ್ತಾರೆ. ವೈದ್ಯರ ನಿಸ್ವಾರ್ಥ ಸೇವೆಯನ್ನು ಗೌರವಿಸಲು ಭಾರತದಲ್ಲಿ ಪ್ರತಿವರ್ಷ ಜುಲೈ ೧ ರಂದು ರಾಷ್ಟ್ರೀಯ ವೈದ್ಯರ ದಿನಾಚರಣೆ ಆಚರಿಸಲಾಗುತ್ತದೆ. ಈ ದಿನವನ್ನು ಪ್ರಸಿದ್ಧ ವೈದಯ ಶಿಕ್ಷಣ ತಜ್ಞ ಹಾಗೂ ಸಮಾಜಸೇವಕರಾದ ಡಾ. ಬಿದನ್ ಚಂದ್ರ ರಾಯ್ ಅವರ ಜನ್ಮ ದಿನದ ನೆನಪಿಗಾಗಿ ಆಚರಿಸಲಾಗುತ್ತದೆ.

ವೈದ್ಯರು ಸಮಾಜದ ಆರೋಗ್ಯ ರಕ್ಷಕರಾಗಿದ್ದಾರೆ. ಅವರು ವಿವಿಧ ರೋಗಗಳನ್ನು ಗುರುತಿಸಿ ಸೂಕ್ತ ಚಿಕಿತ್ಸೆ ನೀಡುವ ಮೂಲಕ ಜನರ ಜೀವವನ್ನು ಉಳಿಸುತ್ತಾರೆ. ಸಣ್ಣ ಮಕ್ಕಳಿಂದ ಹಿಡಿದ ವೃದ್ಧರವರೆಗೆ ಎಲ್ಲರ ಆರೋಗ್ಯ ಜವಾಬ್ದಾರಿಯನ್ನು ಅವರು ಹೊರುತ್ತಾರೆ. ಆಸ್ಪತ್ರೆಗಳು ಆರೋಗ್ಯ ಕೇಂದ್ರಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿಯೂ ವೈದ್ಯರು ಜನರಿಗೆ ಸೇವೆ ಸಲ್ಲಿಸುತ್ತಾರೆ.ವ ವೈದ್ಯರು ರೋಗಿಗಳನ್ನು ಪರೀಕ್ಷಿಸಿ ಔಷಧಿ ನೀಡುವುದರ ಜೊತೆಗೆ ಆರೋಗ್ಯಕರ ಜೀವನಶೈಲಿಯ ಬಗ್ಗೆ ಸಲಹೆ ನೀಡುತ್ತಾರೆ. ರೋಗಗಲನ್ನು ತಡೆಗಟ್ಟಲು ಲಸಿಕೆ ಕಾರ್ಯಕ್ರಮಗಳನ್ನು ಆರೋಗ್ಯ ತಪಾಸಣೇ, ಪೌಷ್ಠಿಕ ಆಹಾರದ ಅರಿವು ಮತ್ತು ಸ್ವಚ್ಛತೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುತ್ತಾರೆ. ತುರ್ತು ಸಂದರ್ಭಗಳಲ್ಲಿ ಹಗಲು ರಾತ್ರಿ ಎನ್ನುವ ಸೇವೆ ಸಲ್ಲಿಸುತ್ತಾರೆ.

ವೈದ್ಯರ ಸೇವೆ ಸಮಾಜಕ್ಕೆ ಅಪಾರವಾಗಿದೆ. ಸಾಂಕ್ರಾಮಿಕ ರೋಗಗಳು ಅಪಘಾತಗಳು, ಪ್ರವಾಹ, ಭೂಕಂಪ ಹಾಗೂ ಇತರ ಪ್ರಕೃತಿ ವಿಕೋಪಗಳ ಸಂದರ್ಭದಲ್ಲಿ ವೈದ್ಯರು ತಮ್ಮ ಕುಟುಂಬಕ್ಕಿಂತಲೂ ರೋಗಿಗಳ ಸೇವೆಗೆ ಹೆಚ್ಚಿನ ಆದಯತೆ ನೀಡುತ್ತಾರೆ. ಅವರ ಸಮಯೋಚಿತ ಚಿಕಿತ್ಸೆ ಸಾವಿರಾರು ಜನರ ಜೀವ ಉಳಿಸುತ್ತಧೆ. ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯರ ಸೇವೆ ಜನರ ಬದುಕನ್ನು ಸುಧಾರಿಸಲು ಬಹಳ ಸಹಾಯಕವಾಗಿದೆ.

ಈ ದಿನ ಆಸ್ಪತ್ರೆಗಳಲ್ಲಿ, ಶಾಲೆಗಳಲ್ಲಿ ಆರೋಗ್ಯ ಜಾಗೃತಿ ಕಾರ್ಯಕ್ರಮಗಳು ಉಚಿತ ಆರೋಗ್ಯ ತಪಾಸಣೇ ಶಿಬಿರಗಳು, ರಕ್ತದಾನ ಶಿಬಿರಗಳು ಆರೋಗ್ಯ ಉಪನ್ಯಾಸಗಳು ಮತ್ತು ವೈದ್ಯಕೀಯ ಸೇವೆಯ ಮಹತ್ವವನ್ನು ತಿಳಿಸುವ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.

ನಾವು ವೈದ್ಯರ ಸಲಹೆಗಳನ್ನು ಪಾಲಿಸಬೇಕು ಅನಾರೋಗ್ಯವಾದಾಗ ಸ್ವಯಂ ಔಷಧಿ ಸೇವಿಸುವ ಪಾಲಿಸಬೇಕು ಅನಾರೋಗ್ಯವಾದಾಗ ಸ್ವಯಂ ಔಷಧಿ ಸೇವಿಸುವ ಬದಲು ವೈದ್ಯರುನ್ನು ಸ್ವಚ್ಛತೆ ಪೌಷ್ಠಿಕ ಆಹಾರ, ನಿಯಮಿತ ವ್ಯಾಯಾಮ ಮತ್ತು ಆರೋಗ್ಯಕರ ಜೀವನ ಶೈಲಿಯನ್ನು ಅನುಸರಿಸಬೇಕು ವೈದ್ಯರನ್ನು ಗೌರವದಿಂದ ಕಾಣುವುದ. ಅವರ ಸೇವೆಗೆ ಕೃತಜ್ಞತೆ ಸಲ್ಲಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

ರಾಷ್ಟ್ರೀಯ ವೈದ್ಯ ದಿನಾಚರಣೆಯು ವೈದ್ಯರ ನಿಸ್ವಾರ್ಥ ಸೇವೆಯನ್ನು ಸ್ಮರಿಸಿ ಅವರಿಗೆ ಗೌರವ ಸಲ್ಲಿಸುವ ವಿಶೇಷ ದಿನವಾಗಿದೆ. ಆರೋಗ್ಯವಂತ ಸಮಾಜ ನಿರ್ಮಾಣದಲ್ಲಿ ವೈದ್ಯರ ಪಾತ್ರ ಅತ್ಯಂತ ಅಮೂಲ್ಯವಾಗಿದೆ. ಅವರ ಸೇವೆಯನ್ನು ಸದಾ ಗೌರವಿಸೋಣ. ವೈದ್ಯರ ಸೇವೆ ಮಾನವ ಸೇವೆ ಎಂಬ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳೋಣ.

**ರೂಪ ಬಿ.ಎನ್. ಸಹಶಿಕ್ಷಕರು**
**ಜಿ.ವಿ.ಸಿ.ಹೆಚ್.ಪಿ.ಎಸ್.(ಆ.ಮಾ.)**

## ಅಲಂಕಾರಿಕ ವಸ್ತು ತಯಾರಿಕೆ.




ದಿನಾಂಕ:03–07–2026 ರಂದು ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯ 9ನೇ ತರಗತಿಯ ವಿದ್ಯಾರ್ಥಿಗಳು ತ್ಯಾಜ್ಯವೆಂದು ತಿರಸ್ಕರಿಸುವ ವಸ್ತುವು ಸೃಜನಶೀಲತೆಯ ಸ್ಪರ್ಶದಿಂದ ಒಂದು ಸುಂದರ ಕಲಾಕೃತಿಯಾಗಬಹುದು. ವಿದ್ಯಾರ್ಥಿಗಳು ಬಳಸಿದ ಹಳೆಯ ನ್ಯೂಸ್ ಪೇಪರ್‌ಗಳನ್ನು ಮರುಬಳಕೆ ಮಾಡಿ ತರಗತಿಯ ಕಿಟಕಿಗಳಿಗೆ ಅಲಂಕಾರಿಕ ತೋರಣಗಳನ್ನು ತಯಾರಿಸಿದ್ದಾರೆ.

## ಶಿಕ್ಷಣದ ಬಗ್ಗೆ ಕವಿತೆಗಳು

ಶಿಕ್ಷಣಕ್ಕಾಗಿ ತಟ್ಟೆ ಮಾರುವ ಪರಿಸ್ಥಿತಿ ಬಂದರೆ ಮಾರಿಬಿಡಿ, ಕೈಯಲ್ಲಿ ರೊಟ್ಟಿ ಇಟ್ಟುಕೊಂಡು ತಿನ್ನಿ ಆದರೆ ಓದುವುದನ್ನು ಬಿಡಬೇಡಿ. ನಾವು ಸ್ವಂತ ಪರಿಶ್ರಮದಿಂದ ಗಳಿಸಬೇಕಾದ ಅತ್ಯಮೂಲ್ಯ ಆಸ್ತಿ ಎಂದರೆ ಅದು ಶಿಕ್ಷಣ ಮಾತ್ರ...!! **ಆರಾಧ್ಯ ಜಿ ಪಿ 8ನೇ ತರಗತಿ SJJMHS**

ಬಿತ್ತನೆ ಆಗಿದ್ದ ಬೀಜ ಒಂದಿನ ಮೊಳಕೆ ಒಡೆದೆ ಒಡೆಯುತ್ತದೆ...ತಲೆಗೆ ಬಿದ್ದ ವಿದ್ಯೆ ಮುಂದೊಂದು ದಿನ ಕೈ ಹಿಡಿದೆ ಹಿಡಿಯುತ್ತದೆ...

ಕಲಿಯುವಾಗ ಶ್ರದ್ಧೆಯಿಂದ ಕಲಿಯಿರಿ...ಕಲಿಯುವಾಗ ಕಲಿಯಲಿಲ್ಲ ಅನ್ನೋ ನೋವು ಮುಂದೆ ಕಾಡಬಾರದು.

**ಕೋಮಲ ಎಚ್ 8ನೇ ತರಗತಿ SJJMHS**

# ಸತ್ಯಮೇವ ಜಯತೇ...& ಒಂದು ಸುಂದರ ಕಥೆ.

ಸತ್ಯದೇವ ಎಂಬ ಒಬ್ಬ ರಾಜ ಇದ್ದನು. ಒಂದು ದಿನ ಮುಂಜಾನೆ ಎದ್ದಾಗ ಸುಂದರಿಯೊಬ್ಬಳು ಅರಮನೆಯಿಂದ ಹೊರಗೆ ಹೋಗುತ್ತಿದ್ದುದ್ದನ್ನು ಕಂಡ. ಅಮ್ಮಾ, ನೀನು ಯಾರು? ಎಂದು ಕೇಳಿದ. ಆಗ ಆಕೆ ನಾನು ಲಕ್ಷ್ಮಿ, ನಿನ್ನ ಮನೆಯಿಂದ ಹೋಗಲಿಚ್ಛಿಸುತ್ತೇನೆ ಎಂದಳು. ರಾಜ ಹೋಗಬಹುದು ಎಂದ. ಸ್ವಲ್ಪ ಹೊತ್ತಿನಲ್ಲಿ ಒಬ್ಬ ಸುಂದರ ಪುರುಷ ಹೊರಗೆ ಹೊರಟ ಆತ ನನ್ನ ಹೆಸರು ದಾನ, ಲಕ್ಷ್ಮಿ ಇರದ ಕಡೆ ನಾನು ಇರುವುದಿಲ್ಲ, ಹೋಗುತ್ತೇನೆ ಎಂದ. (ಹಣ ಇಲ್ಲದ ಕಡೆ ದಾನ ಇರುವುದಿಲ್ಲ) ರಾಜ ನೀನೂ ಹೋಗಬಹುದು ಎಂದ. ಹೀಗೆ ಸದಾಚಾರ, ಯಶ, ಸತ್ಯ ಎಂಬುವವರು ಒಬ್ಬೊಬ್ಬರಾಗಿ ಹೊರಗೆ ಹೊರಟರು. ಸತ್ಯದೇವ ಕೊನೆಯ ವ್ಯಕ್ತಿಯನ್ನು ಪ್ರಶ್ನೆ ಮಾಡಿದ. ನೀನು ಏಕೆ ಹೋಗುವೆ ಎಂದ. ಎಲ್ಲಿ ಲಕ್ಷ್ಮಿ, ದಾನ, ಸದಾಚಾರ, ಯಶ ಇಲ್ಲವೋ ಅಲ್ಲಿ ನಾನೂ ಇರುವುದಿಲ್ಲ ಎಂದ ಸತ್ಯ. ಆಗ ರಾಜ, ನಾನು ಎಲ್ಲರನ್ನೂ ಬಿಡಬಲ್ಲೆ, ಸತ್ಯ ಬಿಡಲಾರೆ ಎಂದು ಹಠಹಿಡಿದು ಬೇಡಿದ. ಸತ್ಯ ಅರಮನೆಗೆ ಪ್ರವೇಶ ಮಾಡಿದ ನಂತರ ಲಕ್ಷ್ಮಿ, ಸದಾಚಾರ, ಯಶ, ದಾನ ಎಲ್ಲರೂ ಅರಮನೆಯೊಳಗೆ ಬಂದರು. ಸತ್ಯಮೇವ ಜಯತೇ. ಎಲ್ಲ ದೇಶ ಕಾಲದಲ್ಲೂ ಸತ್ಯ ಮಾರ್ಗವನ್ನು ಸದಾ ಅನುಸರಿಸೋಣ.

# ಅಕ್ಷರಭ್ಯಾಸ ಕಾರ್ಯಕ್ರಮದ ಭಾವಚಿತ್ರಗಳು





ದಿನಾಂಕ 10 .07.2026 ರಂದು ಶ್ರೀ ವೀರಭದ್ರಪ್ಪ ಎಂ ಚಿಗಟೇರಿ ನರ್ಸರಿ ಶಾಲೆಯ ಹೊಸದಾಗಿ ದಾಖಲಾದ ಪ್ಲೇ ಗ್ರೂಪ್ ವಿದ್ಯಾರ್ಥಿಗಳಿಗೆ ಇಂದು ಶುಭ ಶುಕ್ರವಾರ ಅಕ್ಷರಭ್ಯಾಸ ಕಾರ್ಯಕ್ರಮವನ್ನು ನಡೆಸಲಾಯಿತು. ಹಾಗೂ ಈ ಕಾರ್ಯಕ್ರಮದಲ್ಲಿ ಗುರುಗಳಾದ ಶ್ರೀ ಜಯಂತ್ ಕುಮಾರ್ ಅವರಿಂದ ಶಾಸ್ತ್ರೋಕ್ತವಾಗಿ ಅಕ್ಕಿಯ ರಾಶಿಯಲ್ಲಿ ಮಕ್ಕಳಿಗೆ ಅಕ್ಷರ ಅಭ್ಯಾಸ ಮಾಡಿಸಲಾಯಿತು ಮಂತ್ರ ಪಠಣ ಮಾಡುತ್ತಾ ಎಲ್ಲಾ ಮಕ್ಕಳು ತಮ್ಮ ತಂದೆ ತಾಯಿಗಳೊಂದಿಗೆ ಅಕ್ಷರಭ್ಯಾಸ ಮಾಡಿದರು. ಹಾಗೂ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಶೈಲಜಾ ರವರು ಪೋಷಕರಿಗೆ ತಮ್ಮ ಮಕ್ಕಳನ್ನು ಉತ್ತಮ ವಿದ್ಯಾವಂತರನ್ನಾಗಿ ಮಾಡಿ ಮತ್ತು ಉತ್ತಮ ಸಂಸ್ಕಾರವನ್ನು ನೀಡಿ ಮಕ್ಕಳನ್ನು ಬೆಳೆಸುವಂತೆ ಹೇಳಿ ಮಕ್ಕಳಲ್ಲಿ ಪ್ರಾಮಾಣಿಕತೆ,ನ್ಯಾಯ, ಪರೋಪಕಾರ, ಸಹಕಾರ,ಹಿರಿಯರಿಗೆ ಗೌರವ ಕೊಡುವುದನ್ನು ಕಲಿಸಲು ತಿಳಿಸಿ ಎಲ್ಲಾ ವಿದ್ಯಾರ್ಥಿಗಳಿಗೂ ಶುಭ ಹಾರೈಸಿದರು. ಹಾಗೂ ಗುರುಗಳು ಪೋಷಕರಿಗೆ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಎಂದು ತಿಳಿಸಿ ಶುಭ ಹಾರೈಸಿದರು. ಶ್ರೀ ಸರಸ್ವತಿ ದೇವಿಯ ಪೂಜೆಯನ್ನು ಮಾಡಿ ಪ್ರಸಾದವನ್ನು ಹಂಚಲಾಯಿತು. ಈ ಕಾರ್ಯಕ್ರಮದಲ್ಲಿ ನರ್ಸರಿ ಶಿಕ್ಷಕಿಯಾದ ಶ್ರೀಮತಿ ಸೌಮ್ಯ ಮೇಡಂ ರವರು ಕಾರ್ಯಕ್ರಮದ ಜವಾಬ್ದಾರಿಯನ್ನು ವಹಿಸಿಕೊಂಡು ಅಚ್ಚುಕಟ್ಟಾಗಿ ಕಾರ್ಯಕ್ರಮವನ್ನು ನೆರವೇರಿಸಿದರು. ಹಾಗೂ ಈ ಕಾರ್ಯಕ್ರಮದಲ್ಲಿ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ನಾಗರಾಜ್ ರವರು ಮತ್ತು ಎಲ್ಲಾ ಶಿಕ್ಷಕ ವರ್ಗದವರು ಹಾಗೂ ಪ್ರಾಥಮಿಕ ಶಾಲೆಯ ಎಲ್ಲಾ ಶಿಕ್ಷಕರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಯವರಾದ ಶ್ರೀ ಮನೋಹರ್ ಎಸ್ ಚಿಗಟೇರಿ ಸರ್ ರವರು ಮತ್ತು ಶೈಕ್ಷಣಿಕ ಸಲಹೆಗಾರದ ಶ್ರೀಮತಿ ಆರ್ ವಾಗ್ದೇವಿಯವರು ಅಕ್ಷರ ಅಭ್ಯಾಸ ಮಾಡಿದ ಎಲ್ಲ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು

ಧನ್ಯವಾದಗಳು

**ಶ್ರೀಮತಿ ಶೈಲಜಾ ಎಸ್ ಎಂ ಮುಖ್ಯೋಪಾಧ್ಯಾಯಿನಿ**

**ಎಸ್ ವಿ ಎಂ ಸಿ ಎಚ್ ಪಿ ಎಸ್ ವಿನೋಬನಗರ ಕ್ಯಾಂಪಸ್ ದಾವಣಗೆರೆ**

# ಗುರುಬಸಮ್ಮ ವಿ. ಚಿಗಟೇರಿ ನರ್ಸರಿ ಮಕ್ಕಳ ಚಟುವಟಿಕೆಗಳ ಚಿತ್ರಪಟಗಳು

